ಮೊದಲ ಸಿನಿಮಾ ನಂತರ ಲಾಕ್‌ಡೌನ್ ಕಾರಣಕ್ಕೆ ಮನೆಯಲ್ಲಿಯೇ ಕೂತಿದ್ದ ಶ್ರುತಿ, ಲಾಕ್‌ಡೌನ್ ನಂತರ 'ಬ್ಲಡ್ ಹ್ಯಾಂಡ್', 'ಚಿ.ಸೌ. ಕನ್ಯಾಕುಮಾರಿ' ಸಿನಿಮಾಗಳಲ್ಲಿ ನಟಿಸಿದ್ದಾರೆ. ಈ ಚಿತ್ರಗಳು ಇನ್ನೂ ಚಿತ್ರೀಕರಣದ ಹಂತದಲ್ಲಿವೆ. ಅನೀಶ್ ತೇಜೇಶ್ವರ್ ಅವರ 'ಬೆಂಕಿ' ಸಿನಿಮಾದಲ್ಲಿಯೂ ಅವರು ಮುಖ್ಯ ಪಾತ್ರವೊಂದರಲ್ಲಿ ನಟಿಸಿದ್ದಾರೆ.

ಇವುಗಳ ಜೊತೆಗೆ, ಹೊಸದೊಂದು ಚಿತ್ರಕ್ಕೂ ಶ್ರುತಿ ಸಹಿ ಹಾಕಿದ್ದಾರೆ. ಆರ್. ಚಂದ್ರು ಅವರ ಜೊತೆಗೆ ಕೆಲಸ ಮಾಡಿ ಅನುಭವ ಇರುವ ನವೀನ್ ಕುಮಾರ್ ಅವರ ಹೊಸ ಸಿನಿಮಾದಲ್ಲಿ ಶ್ರುತಿ ನಾಯಕಿಯಾಗಿ ನಟಿಸುತ್ತಿದ್ದಾರೆ.

'ನಾನು ಈವರೆಗೆ ನಟಿಸಿದ ಪಾತ್ರಗಳಲ್ಲೆಲ್ಲ ತುಂಬ ಇಷ್ಟವಾದ ಪಾತ್ರವಿದು. ಇಡೀ ಚಿತ್ರ ಮಹಿಳಾಪ್ರಧಾನವಾಗಿದೆ. ಜನರಿಗೆ ಪ್ರೀತಿ ಎಷ್ಟು ಮುಖ್ಯ ಎಂದು ತೋರಿಸಿಕೊಡುವ ಪಾತ್ರ. ನನ್ನ ವೃತ್ತಿಜೀವನವನ್ನು ಮತ್ತೊಂದು ಎತ್ತರಕ್ಕೆ ಆ ಸಿನಿಮಾ ಕೊಂಡೊಯ್ಯುತ್ತದೆ ಎಂಬ ನಂಬಿಕೆಯಿದೆ' ಎಂದು ವಿಶ್ವಾಸದಿಂದ ಹೇಳುತ್ತಾರೆ ಶ್ರುತಿ. ಇನ್ನಷ್ಟೇ ಈ ಚಿತ್ರದ ಟೈಟಲ್ ಮತ್ತು ಉಳಿದ ತಾರಾಗಣಗಳ ಆಯ್ಕೆ ನಡೆಯಬೇಕಿದೆ.

ಶ್ರುತಿಗೆ ವಿಷ್ಣುವರ್ಧನ್ ಅಂದ್ರೆ ತುಂಬ ಇಷ್ಟ. ಅವರ ಎಲ್ಲ ಸಿನಿಮಾಗಳನ್ನು ಪದೇ ಪದೇ ನೋಡುತ್ತಿರುತ್ತಾರೆ.

'ಈಗಿನ ನಟರಲ್ಲಿ ದರ್ಶನ್ ಅಂದ್ರೆ ಇಷ್ಟ. ಯಾಕೆಂದರೆ ಸರಳತೆ, ಪ್ರಾಣಿ ಪ್ರೀತಿಗಳಲ್ಲಿ ಅವರಿಗೆ ವಿಷ್ಣುವರ್ಧನ್ ಜೊತೆ ಹೋಲಿಕೆ ಇದೆ. ಅವರ ಸಿನಿಮಾದಲ್ಲಿ ಸಣ್ಣಪಾತ್ರ ಸಿಕ್ಕರೂ ಖುಷಿಯಿಂದ ಒಪ್ಪಿಕೊಳ್ಳುತ್ತೇನೆ' ಎಂದು ತಮ್ಮ ಮನದಿಂಗಿತವನ್ನು ವ್ಯಕ್ತಪಡಿಸುವ ಶ್ರುತಿ, ಯಾವ ರೀತಿಯ ಪಾತ್ರಗಳು ಸಿಕ್ಕರೂ ಖುಷಿಯಿಂದಲೇ ನಟಿಸುತ್ತೇನೆ ಎಂದೂ ಹೇಳುತ್ತಾರೆ. ■



## ಕಾಂತಾರ ಕಥೆ!

'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು' ಸಿನಿಮಾದ ನಂತರ ನಟನೆಯಲ್ಲಿಯೇ ಹೆಚ್ಚಾಗಿ ತೊಡಗಿಸಿಕೊಂಡಿದ್ದ ರಿಷಬ್ ಈಗ ಮತ್ತೆ ನಿರ್ದೇಶನದಲ್ಲಿ ಬ್ಯುಸಿಯಾಗಿದ್ದಾರೆ. ಅವರ ಮಹತ್ವಾಕಾಂಕ್ಷೆಯ 'ರುದ್ರ ಪ್ರಯಾಗ' ಸಿನಿಮಾದ ಕೆಲಸಗಳು ಶುರುವಾಗುವ ಹೊತ್ತಿಗೇ ಕೊರೊನಾ ಬಂದು ಚಿತ್ರರಂಗವೇ ಸ್ತಬ್ಧವಾಗಿತ್ತು. ಲಾಕ್‌ಡೌನ್‌ನಲ್ಲಿಯೇ 'ಹೀರೊ' ಎಂಬ ಸಿನಿಮಾದಲ್ಲಿ ನಟಿಸಿ, ನಿರ್ಮಿಸಿದ್ದ ಅವರು ನಂತರ ಹಲವು ಸಿನಿಮಾದಲ್ಲಿ ನಟಿಸಲು ಒಪ್ಪಿಕೊಂಡಿದ್ದರು. ಈಗ ನಿರ್ದೇಶನದಲ್ಲಿಯೂ ಮುಳುಗಿರುವ ರಿಷಬ್ ನಿರ್ದೇಶನದ ಹೊಸ ಸಿನಿಮಾವನ್ನು 'ಹೊಂಬಾಳೆ ಫಿಲ್ಮ್ಸ್' ನಿರ್ಮಾಣ ಮಾಡುತ್ತಿರುವುದು ವಿಶೇಷ.

ಇತ್ತೀಚೆಗೆ ಟೈಟಲ್ ಮತ್ತು ಫಸ್ಟ್ ಲುಕ್ ಬಿಡುಗಡೆಯಾಗಿದ್ದು, 'ಕಾಂತಾರ' ಎಂಬ ವಿಶಿಷ್ಟ ಶೀರ್ಷಿಕೆಯನ್ನು ಇಡಲಾಗಿದೆ. ಫಸ್ಟ್‌ಲುಕ್‌ನಲ್ಲಿಯೇ ಇದು ಕರಾವಳಿ ಭಾಗದ ಕಥೆ ಎಂಬುದರ ಸುಳಿವು ಇದ್ದು, ಕಂಬಳದ ಸುತ್ತ ಹೆಣೆದ ಕಥೆ ಎಂದೂ ಊಹಿಸಬಹುದು. ಇದೇ ಆಗಸ್ಟ್ 27ರಿಂದ ಚಿತ್ರೀಕರಣ ಶುರುವಾಗಲಿದ್ದು, ರಿಷಬ್ ಅವರೇ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಅಚ್ಯುತ್ ಕುಮಾರ್ ಮತ್ತು ಕಿಶೋರ್ ಕೂಡ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ■



## ಸೆಲ್ಫಿ ಅಲ್ಲ ಗ್ರೂಪಿ!

ಇದು ಸೆಲ್ಫಿ ಕಾಲ. ಎಲ್ಲರ ಮೊಬೈಲ್‌ಗಳಲ್ಲಿಯೂ ಮುಂಬದಿಯ ಕ್ಯಾಮೆರಾವೇ ಕ್ಲಿಕ್ ಆಗುತ್ತಿರುವ ಕಾಲದಲ್ಲಿ, ಗಾಂಧಿನಗರದಲ್ಲಿ ಹೊಸಬರ ತಂಡವೊಂದು ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಿದೆ. 'ಗ್ರೂಪಿ' ಎಂಬುದು ಅವರ ಸಿನಿಮಾದ ಹೆಸರು. 'ಒಬ್ಬರೇ ಫೋಟೊ ತೆಗೆದುಕೊಂಡರೆ ಸೆಲ್ಫಿ. ಗುಂಪಾಗಿ ಫೋಟೊ ತೆಗೆದುಕೊಂಡರೆ ಗ್ರೂಪಿ' ಎಂಬುದು ಚಿತ್ರತಂಡದ ವಿವರಣೆ.

ಹಾಗೆಂದು ಹೊಸ ರೀತಿಯ ಶಬ್ದ ಹುಟ್ಟುಹಾಕಬೇಕು ಎಂಬ ಉದ್ದೇಶದಿಂದ ಈ ಶೀರ್ಷಿಕೆ ಇಟ್ಟಿದ್ದಲ್ಲ. ಚಿತ್ರದ ಕಥೆಗೆ ಸರಿಯಾಗಿ ಹೊಂದುವ ಹಾಗಿದೆ ಎಂಬ ಕಾರಣಕ್ಕೇ ಬಳಸಿಕೊಳ್ಳಲಾಗಿದೆ. ಬೆಂಗಳೂರು, ಹೊನ್ನಾವರ, ಮಡಿಕೇರಿ ಹಾಗು ಪಶ್ಚಿಮ ಘಟ್ಟಗಳ ಸುಂದರ ಪರಿಸರದಲ್ಲಿ ಸುಮಾರು ಐವತ್ತು ದಿನಗಳ ಚಿತ್ರೀಕರಣ ಮುಗಿಸಿರುವ ಈ ಚಿತ್ರದ ಮೂಲಕ ಸಮಾಜಕ್ಕೊಂದು ಒಳ್ಳೆಯ ಸಂದೇಶವನ್ನೂ ಕೊಡುತ್ತಿದ್ದಾರಂತೆ.

ರವಿ ಅರ್ಜುನ್ ಅವರು ಆ್ಯಕ್ಷನ್ ಕಟ್ ಹೇಳಿರುವ ಈ ಚಿತ್ರದಲ್ಲಿ ಆರ್ಯನ್ ಮತ್ತು ಪದ್ಮಶ್ರೀ ಸಿ. ಜೈನ್ ನಾಯಕ, ನಾಯಕಿಯಾಗಿ ನಟಿಸುತ್ತಿದ್ದಾರೆ. ವಿಜೇತ್ ಕೃಷ್ಣ ಸಂಗೀತ ಸಂಯೋಜನೆ ಮಾಡಿರುವ ಈ ಚಿತ್ರಕ್ಕೆ ಕೆ.ಜಿ. ಸ್ವಾಮಿ ಹಣ ಹೂಡಿದ್ದಾರೆ. ಇತ್ತೀಚೆಗಷ್ಟೇ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಹಾಡುಗಳನ್ನು ಬಿಡುಗಡೆ ಮಾಡಿದ್ದಾರೆ.

ಚಿತ್ರ: ಕೆ.ಎನ್. ನಾಗೇಶ್‌ಕುಮಾರ್

